# ಬೇಲೂರಿನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 156/2019

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಂಜನಾಯಕ | P.W | 3 |
| ತಂದೆಯ ಹೆಸರು | ಜಗನಾಯಕ | C.W | 3 |
| ವಯಸ್ಸು | 38 ವರ್ಷ | | |
| ಉದ್ಯೋಗ | ವ್ಯವಸಾಯ | ಪ್ರ.ವ.ಬೋ | |
| ವಾಸಸ್ಥಳ | ಕಿರೇಹಳ್ಳಿ | ದಿನಾಂಕ: 12-08-2025 | |

**ಮುಖ್ಯ ವಿಚಾರಣೆ:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

1) ಮೃತ ಪಾರ್ವತಮ್ಮ ನನ್ನ ಸಂಬಂಧಿಕರಾಗಬೇಕು. ಚಾಸಾ 1 ನನ್ನ ಸಂಬಂಧಿಕರಾಬೇಕು. ನಾನು ಅಪಘಾತವನ್ನು ಕಣ್ಣಾರ ನೋಡಿಲ್ಲ. ಈ ಕೇಸಿನ ಬಗ್ಗೆ ಗೊತ್ತಿಲ್ಲ.

2) ನನಗೆ ಈಗ ತೋರಿಸಿದ ನಿಪಿ 2 ಮಹಜರ್ ನಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ- 2(ಬಿ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ 5-6 ವರ್ಷಗಳ ಹಿಂದೆ ಚಾಸಾ 1 ರವರ ಮನೆಯ ಹತ್ತಿರ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಸಹಿ ಮಾಡಿರುತ್ತೇನೆ ಎನ್ನುವುದು ಗೊತ್ತಿಲ್ಲ. ನಿಪಿ-2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ 1 ಪೋಟೊದಲ್ಲಿ ನಾನು ಇರುತ್ತೇನೆ. ಪೊಲೀಸರು ಸ್ಥಳದಲ್ಲಿ ನಿಲ್ಲಿಸಿ ಪೋಟೊ ತೆಗೆದಿರುತ್ತಾರೆ. ಯಾವ ಕಾರಣಕ್ಕೆ ಪೋಟೊ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಟ್ರಾಕ್ಟರ್ ನ್ನು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು)**

**ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದ :-**

3) ದಿ:16-01-2019 ರಂದು ಸಂಜೆ 5-00 ಗಂಟೆ ಸಮಯದಲ್ಲಿ ಚಾಸಾ 1 ರವರ ಮನೆಯ ಹತ್ತಿರ ಕೂಗಿಕೊಂಡ ಶಬ್ದ ಕೇಳಿಕೊಂಡಿತು ಎಂದರೆ ಸರಿಯಲ್ಲ. ಅಲ್ಲಿ ನೋಡಿದಾಗ ಆರೋಪಿಯು ಟ್ರಾಕ್ಟರ್ ನ್ನು ನಿರ್ಲಕ್ಷತದಿಂದ ರಿವರ್ಸ್ ಮಾಡಿ ಮೃತ ಪಾರ್ವತಮ್ಮನಿಗೆ ಡಿಕ್ಕಿಪಡಿಸಿದನು ಎಂದರೆ ಸರಿಯಲ್ಲ. ಸದರಿ ಪಾರ್ವತಮ್ಮ ಸ್ದಳದಲ್ಲಿಯೇ ಮೃತಪಟ್ಟಿದರು ಎಂದರೆ ಸರಿಯಲ್ಲ.

4) ಈ ಬಗ್ಗೆ ಪೊಲೀಸರಿಗೆ ಮಹಜರು ಮಾಡುವ ಸಮಯದಲ್ಲಿ ಸ್ದಳ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ಸದರಿ ಸ್ಥಳವನ್ನು ಪರಿಶೀಲಿಸಿ ಟ್ರಾಕ್ಟರ್ ನ್ನು ಅಮಾನತುಪಡಿಸಿಕೊಂಡು ನನ್ನ ಮತ್ತು ಪಂಚರ ಸಮಕ್ಷಮ ನಿಪಿ-2 ರಂತೆ ಸ್ಥಳ ಮಹಜರ್ ನ್ನು ಬೆಳಗ್ಗೆ 10-00 ರಿಂದ 10-30 ರವರೆಗೆ ಜರುಗಿಸಿರುತ್ತಾರೆ ಎನ್ನುವುದು ಸರಿಯಲ್ಲ. ಎಲ್ಲಾ ವಿಚಾರಗಳನ್ನು ತಿಳಿದುಕೊಂಡೆ ನಿಪಿ-2 ಕ್ಕೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎನ್ನುವುದು ಸರಿಯಲ್ಲ.

5) ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದ ಭಾಗದಂತೆ ದಿಃ 16-01-2019 ರಂದು................. ಕ್ರಮ ಜರುಗಿಸುವಂತೆ ಎಂದು ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆ ಅಂಶವನ್ನು ನಿರಾಕರಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

6) ಹೇಳಿಕೆಯನ್ನು ನೀಡಿದ್ದರೂ, ಅಪಘಾತವನ್ನು ನೋಡಿದ್ದರೂ ಮತ್ತು ಮಹಜರ್ ವಿಚಾರ ಗೊತ್ತಿದ್ದರಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲು ಶ್ರೀ ಬಿ ವಿ ಆರ್   .,ವಕೀಲರು ಹಾಜರಿದ್ದು ತಮ್ಮದು ಏನು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಓ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., **ಬೇಲೂರು**